<u>ಪ್ರಧಾನ ಸಿವಿಲ್ ಮತ್ತು ಪ್ರ.ದ.ನ್ಯಾ.ದಂ.ರವರ ನ್ಯಾಯಾಲಯ, ಕಡೂರು.</u>

**C.C. No.732/2024. P.W.-1.**

ದಿನಾಂಕ:**06.01.2026** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಲಾಯಿತು

<u>ಪಾಟೀ ಸವಾಲು:</u> ಆರೋಪಿ ಪರ ಶ್ರೀ ಎಂ ಎನ್ ವಕೀಲರಿಂದ:-

ನಾನು ವ್ಯವಸಾಯ ಮಾಡುತ್ತೇನೆ. ಬೀರೂರಿನ ಹಿರಿಯಂಗಳ ಗ್ರಾಮದಲ್ಲಿ ನನ್ನ ತಾಯಿಯ ಅಣ್ಣನ ಹೆಸರಿನಲ್ಲಿರುವ 2 ಎಕರೆ ಅಡಿಕೆ ತೋಟವನ್ನು ನಾನು ನಿರ್ವಹಣೆ ಮಾಡುತ್ತೇನೆ. ನನ್ನ ಸ್ವಂತ ಊರು ಕೊಪ್ಪಳ ಜಿಲ್ಲೆಯ ಕರಟಗಿ ತಾಲ್ಲೂಕು ಆಗಿರುತ್ತದೆ, ಕರಟಗಿಯಲ್ಲಿ ನನ್ನ ತಾಯಿಯ ಹೆಸರಿಗೆ ಇರುವ 16 ಎಕರೆ ಜಮೀನನ್ನು ನೋಡಿಕೊಳ್ಳುತ್ತೇನೆ. ಸದರಿ ಜಮೀನುಗಳ ಪಹಣಿಯನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ನನ್ನ ಸ್ವಂತ ಊರಾದ ಕರಟಗಿನಿಂದ ಹಿರಿಯಂಗಳಕ್ಕೆ ಸುಮಾರು 300 ಕಿ ಮೀ ಆಗುತ್ತದೆ. ನನ್ನ ತಾಯಿಯವರಿಗೆ ಒಟ್ಟು 6 ಜನ ಸಹೋದರ - ಸಹೋದರಿಯರು ಇದ್ದಾರೆ, ಅವರ ಪೈಕಿ 4 ಜನ ಹೆಣ್ಣು ಮಕ್ಕಳು ಮತ್ತು 2 ಗಂಡು ಮಕ್ಕಳು. ನನ್ನ ತಾಯಿಯ ಅಣ್ಣನ ಹೆಸರು ಯಾಗಣ್ಣ. ನನ್ನ ತಾಯಿಯ ಅಣ್ಣನಾದ ಯಾಗಣ್ಣ ರವರ ತೋಟವನ್ನು ನೋಡಿಕೊಳ್ಳಲು ನನ್ನ ಮತ್ತು ಅವರ ನಡುವೆ ಯಾವುದೇ ಬರವಣಿಗೆ / ದಾಖಲೆ ಆಗಿರುವುದಿಲ್ಲ. ಅವರಿಗೆ ಇನ್ನು ಹೆಚ್ಚಿಗೆ ಜಮೀನು ಇರುವುದರಿಂದ ನನಗೆ 2 ಎಕರೆ ಜಮೀನು ನೋಡಿಕೊಳ್ಳಲು ಬಿಟ್ಟಿರುತ್ತಾರೆ. ನನಗೆ ವೈಯಕ್ತಿಕವಾಗಿ ಆದಾಯ ತರುವಂತಹ ಯಾವುದೇ ಜಮೀನು ಇರುವುದಿಲ್ಲ ಆದರೆ ನನ್ನ ತಾಯಿಯ ಹೆಸರಿನಲ್ಲಿರುವ ಜಮೀನು ಒಟ್ಟು ಕುಟುಂಬದ ಸ್ವತ್ತು ಇರುತ್ತದೆ.

ನನಗೆ ಕಡೂರಿನ ಉಮಾದೇವಿ ಎಂಬುವವರು ಗೊತ್ತು. ಸದರಿಯವರು ಎಮ್ಮೆದೊಡ್ಡಿ ರಸ್ತೆ, ಕಡೂರು ಇಲ್ಲಿ ವಾಸವಿದ್ದಾರೆ. ಆರೋಪಿ ಮತ್ತು ಉಮಾದೇವಿ ರವರು ತುಂಬಾ ಪರಿಚಯಸ್ಥರು ಎಂದರೆ ನನಗೆ ಗೊತ್ತಿಲ್ಲ. ಈ ಚೆಕ್ ಕೇಸ್ ಅನ್ನು ಒಟ್ಟು 10 ಲಕ್ಷಕ್ಕೆ ಸಲ್ಲಿಸಿರುತ್ತೇನೆ. ಈ ರೂ.10 ಲಕ್ಷ ಹಣದ ವ್ಯವಹಾರದ ವಿಚಾರವಾಗಿ ಉಮಾದೇವಿ ರವರ ವಿರುದ್ಧ ನಾನು ಕರಟಗಿ ತಾಲ್ಲೂಕಿನ ನ್ಯಾಯಾಲಯದಲ್ಲಿ ಒಂದು ಕೇಸು ಸಲ್ಲಿಸಿದ್ದೇನೆ, ಈ ರೂ.10 ಲಕ್ಷದ ವ್ಯವಹಾರಕ್ಕೆ ಸಂಬಂಧಪಟ್ಟಂತೆ ಸಲ್ಲಿಸಿರುವುದಿಲ್ಲ. ಬೇರೆ ರೂ.10 ಲಕ್ಷದ ವ್ಯವಹಾರದ ಸಂಬಂಧವಾಗಿ ಸಲ್ಲಿಸಿರುತ್ತೇನೆ.

ನಾನು ಆರೋಪಿ ಮತ್ತು ಉಮಾದೇವಿ ರವರನ್ನು ಹೊರತು ಪಡಿಸಿ ಬೇರೆ ಯಾರಿಗು ಹಣವನ್ನು ಸಾಲವಾಗಿ ನೀಡಿರುವುದಿಲ್ಲ. ನಾನು ಆದಾಯ ತೆರಿಗೆ ಪಾವತಿ ಮಾಡುತ್ತಿರುವುದಿಲ್ಲ. ನಾನು ಸಾಲವಾಗಿ ನೀಡಿರುತ್ತೇನೆ ಎಂದು ಹೇಳುವ ಈ ರೂ.20 ಲಕ್ಷ ಹಣ ನನಗೆ ವ್ಯವಸಾಯದಿಂದ ಬಂದಿರುತ್ತದೆ.

ನನ್ನ ತಂದೆಗೆ ನಾನು ಮತ್ತು ನನ್ನ ತಂಗಿ ಇಬ್ಬರು ಮಕ್ಕಳು. ನನ್ನ ತಂಗಿಯನ್ನು ಬಾಗಲಕೋಟೆಯ ಬಿಳಗಿ ತಾಲ್ಲೂಕಿಗೆ ಮದುವೆ ಮಾಡಿಕೊಟ್ಟಿರುತ್ತೇನೆ. ನಾನು ಕಡಾರು ತಾಲ್ಲೂಕಿನ ಖಾಯಂ ನಿವಾಸಿಯಲ್ಲ ಎಂದರೆ ಸರಿ, ಸಾಕ್ಷಿ ಮುಂದುವರೆದು ನಾನು ಜಮೀನನ್ನು ನಿರ್ವಹಣೆ ಮಾಡಿಕೊಂಡು ಹೋಗುತ್ತಿರುತ್ತೇನೆ. ನನ್ನ ತಾಯಿಯ ಹೆಸರಿಗೆ ಇರುವ ಜಮೀನಿನ ಪಹಣಿ ಹಾಜರುಪಡಿಸಲು ನನಗೆ ತೊಂದರೆ ಇಲ್ಲ. ನನ್ನ ತಾಯಿಯ ಹೆಸರಿಗೆ ಇರುವ 16 ಎಕರೆ ಜಮೀನಿನ ಸರ್ವೆ ನಂಬರ್ ನನಗೆ ಗೊತ್ತು. ಸದರಿ 16 ಎಕರೆ ಜಮೀನು ಮಳೆಯಾಶ್ರಿತ ಜಮೀನೇ ಎಂದರೆ ಸಾಕ್ಷಿಯ ಅದು ನಿರಾವರಿ ಜಮೀನು ಆಗಿರುತ್ತದೆ ಎಂದು ನುಡಿಯುತ್ತಾರೆ. ನಾನು ಜಮೀನನ್ನು ಆಧಾರ ಮಾಡಿ ಯಾವ ಬ್ಯಾಂಕಿನಲ್ಲಿಯೂ ಸಾಲ ಪಡೆದಿರುವುದಿಲ್ಲ.

ನನಗೆ ಒಟ್ಟು ಜಮೀನಿನಿಂದ ಒಟ್ಟು ವಾರ್ಷಿಕ ಆದಾಯ ರೂ.17 ಲಕ್ಷ ಬರುತ್ತದೆ. ನನ್ನ ಕುಟುಂಬದ ಖರ್ಚು-ವೆಚ್ಚಗಳನ್ನು ಕಳೆದು ನನಗೆ ವಾರ್ಷಿಕ ರೂ.12 ಲಕ್ಷ ಹಣ ಉಳಿತಾಯವಾಗುತ್ತದೆ. ನಾನು ಸರ್ಕಾರದಿಂದ ನೀಡುವ ಪಡಿತರವನ್ನು ಯಾವ ಗ್ರಾಮದಲ್ಲಿ ಪಡೆಯುತ್ತೀರಿ ಎಂದರೆ ಸಾಕ್ಷಿಯು ಪಡಿತರ ಪಡೆಯಲು ನನ್ನ ಬಳಿ ಬಿ ಪಿ ಎಲ್ ಕಾರ್ಡ್ ಇಲ್ಲ ಎಂದು ನುಡಿಯುತ್ತಾರೆ. ರೂ.5 ಲಕ್ಷ ಕ್ಕಿಂತ ಹೆಚ್ಚು ಆದಾಯವಿದ್ದರೆ ಆದಾಯ ತೆರಿಗೆ ಪಾವತಿಸಬೇಕಾದ ಕ್ರಮವಿದೆ ಎಂದರೆ ಸಾಕ್ಷಿಯು ಕೃಷಿ ಮೂಲದ ಆದಾಯಕ್ಕೆ ಆದಾಯ ತೆರಿಗೆ ಪಾವತಿ ಮಾಡಬೇಕಾಗಿಲ್ಲ ಎಂದು ನುಡಿಯುತ್ತಾರೆ.

ಆರೋಪಿ ನನಗೆ30 ವರ್ಷದಿಂದ ಪರಿಚಯ. ಆರೋಪಿಯು ದೂರದ ಸಂಬಂಧಿಯಾಗಬೇಕು. ಆರೋಪಿಯು ಕಡೂರು ನಗರದಲ್ಲಿ ಬಾರ್ ಆಂಡ್ ರೆಸ್ಟೋರೆಂಟ್ ನಡೆಸುತ್ತಾರೆ. ಸದರಿ ಬಾರ್/ರೆಸ್ಟೋರೆಂಟ್ ಅವರ ತಾಯಿಯ ಹೆಸರಿನಲ್ಲಿ ಇದೆ ಎಂದು ಆರೋಪಿ ನನಗೆ ತಿಳಿಸಿರುತ್ತಾರೆ. ಆರೋಪಿಯು ಆರ್ಥಿಕವಾಗಿ ಸಬಲರಾಗಿದ್ದಾರೆ ಎಂದರೆ ಈಗಿನ ಪರಿಸ್ಥಿ ನನಗೆ ಗೊತ್ತಿಲ್ಲ, ಮೊದಲು ಚೆನ್ನಾಗಿ ಇದ್ದರು.

ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲು ಮಾಡಲು ಕಾಲವಕಾಶ ಕೋರಿದ್ದು, ಕಾಲವಕಾಶ ನೀಡಿ ಮುಂದೂಡಲಾಯಿತು.
(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ ಒ,

ಸಹಿ/-
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ:ದ:ನ್ಯಾ:ದಂ.,ರವರು, ಕಡೂರು.